ಮೈಸೂರ ಗೆಜಿಟ.

ಸಂ. XXXI. ಸರ್ಕಾರದಿಂದ ಘಾಯಿಷ್ ಆದ್ದು. [ನಂ. 28.

ಬೆಂಗಳೂರು, ಗುರುವಾರ, ಜುಲೈ ತಾ॥ 16, ಸ॥ 1896.

IIನೇ ಭಾಗ.

ಇಂಡ್ಯಗವರ್ನಮೆಂಟ, ರೆಸಿಡೆಂಟರು, ಚೀಫ್ ಜಡ್ಜ್ಗಳು ವಗೈರೇರಿಂದ ಕೊಡೋಕ್ಷಾದ ಇಸ್ತಿಹಾರ್ನಾಮೆಗಳು.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಬೋರ್ಡ್ ಆಫಿಸಿನಿಂದ.

ನೋಟಿಸ್.

ತಾರೀಖು 6ನೇ ಜುಲೈ 1896.

ಸ॥ 1896ನೇ ಇಸವಿ ಜೂನ್ 30ನೇ ಮುಕ್ತಮಿನ ಬೋರ್ಡು ಮೀಟಿಂಗ್‌ನಲ್ಲಿ ಪ್ಯಾಸಾದ ರೆಜೊಲ್ಯೂಷನ್ ಅನುಸರಿಸಿ, ಸಾದೆ ಮತ್ತು ಇದ್ದಲು ವ್ಯಾಪಾರದಾರರಿಗೆ ಇದರಿಂದ ತಿಳಿಯಪಡಿಸುವದೇನಂದರೆ:—

ಸಿಟಿ ಮಜ್ಕೂರಿನಲ್ಲಿ ಸಾದೆ ಮತ್ತು ಇದ್ದಲು ವ್ಯಾಪಾರದಾರರು ತಮ್ಮ ಅಂಗಡಿಗಳಲ್ಲಿ ಇದರ ಕೆಳಗೆ ಸೈನ್ ಮಾಡಿ ಇರುವವರಿಂದ ಕೊಡಲ್ಪಡುವ "ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ ಎಂಬ" ಛಾಪೆವುಳ್ಳಂಥಾ ಕ್ರಮವಾದ ತೂಕದ ಕಲ್ಲುಗಳನ್ನ ಉಪಯೋಗಿಸಬೇಕು. ಹಾಗೆ ಛಾಪೆ ಇಲ್ಲದ ತೂಕದ ಕಲ್ಲುಗಳನ್ನು ಉಪಯೋಗಿಸಿದಂಥಾವರನ್ನ ವೋಸಕೃತ್ಯಕ್ಕೆ ಗುರಿಮಾಡಿ ಲಾ ಅನುಸರಿಸಿ ಕ್ರಮ ನಡಿಸಲ್ಪಡುತ್ತೆ.

2. ಮೇಲೆಕಂಡ ಷರತ್ತುಗಳನ್ನ ಚಾಲತಿ ಇಸವಿ ಜುಲೈ ಗುರ್ತೀ ಲಾಗಾಯತು ಕೊಡಲ್ಪಡುವ ಲೈಸೆನ್ಸುಗಳಲ್ಲಿ ನಮೂದಿಸಲಾಗುತ್ತೆ.

3. ಈ ಸಂಬಂಧವಾದ ವ್ಯಾಪಾರದಾರರೆಲ್ಲರೂ ಬಂದೀ ನಮೂನೆಯಾದ ತೂಕದ ಕಲ್ಲುಗಳನ್ನ ಅಂಗಡಿಗಳಲ್ಲಿ ಉಪಯೋಗಿಸಬೇಕು. ಡಿಟೋ ನಮೂನೆ ಕಲ್ಲುಗಳನ್ನ ಮ್ಯುನಿಸಿಪಲ್ ಕಲೆಕ್ಟರ್ ಆಫಿಸಿನಲ್ಲಿ ನೋಡಬಹುದು. ಲೈಸೆನ್ಸು ತೆಗೆದುಕೊಳ್ಳುವ ವೇಳೆ ಡಿಟೋ ಕಲ್ಲುಗಳನ್ನ ಹಾಜರ್ಮಾಡಬೇಕು. ಅವುಗಳನ್ನ ಅಜಮಾಯಿಷಿಯಿಂದ ಛಾರ್ಜ್ ಇಲ್ಲದೆ ಛಾಪೆ ಹಾಕಿ ಕೊಡಲ್ಪಡುವದು. ಮ್ಯುನಿಸಿಪಾಲಿಟಿಯಿಂದ ಅಂಥಾ ತೂಕದ ಕಲ್ಲುಗಳನ್ನ ಸಪ್ಲೈ ಆಗಬೇಕೆಂಬ ಇಷ್ಟವುಳ್ಳವರಿಗೆ ಖರೀದಿಗೆ ಕೊಡಿಸಲಾಗುವದು.

ಟಿ. ಟಿ. ಲೆನಾರ್ಡ್,
ಪ್ರಸಿಡೆಂಟ್.